<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **537 (533)** |
| **ಮಾನ್ಯ ಸದಸ್ಯರ ಹೆಸರು** | **ಶಿವಣ್ಣ, ಬಿ.ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **20-08-2026** |
| **ಉತ್ತರಿಸುವ ಸಚಿವರು** | **ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ: 22.05.2026 ರಂದು ಕಾರ್ಮಿಕ ಇಲಾಖೆಯು ಹೊರಡಿಸಿರುವ ನೂತನ ಕನಿಷ್ಠ ವೇತನ ಆದೇಶವನ್ನು ರಾಜ್ಯದ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರ ಮತ್ತು ಶಾಸನಬದ್ಧ ಸಂಸ್ಥೆಗಳಲ್ಲಿ ಜಾರಿಗೊಳಿಸಲಾಗಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯ ದತ್ತ ನಮೂದಕರಿಗೆ (DEO) ಇದುವರೆಗೆ ಜಾರಿಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಆ) | ಒಂದೇ ಸೌಧ/ಇಲಾಖೆ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 'ಡಿ' ದರ್ಜೆ ಹೊರಗುತ್ತಿಗೆ ನೌಕರರಿಗೆ ದಿನಾಂಕ:19.07.2026 ರಿಂದ ಹೊಸ ಕನಿಷ್ಠ ವೇತನ ನೀಡಲಾಗುತ್ತಿದ್ದು, ದತ್ತ ನಮೂದಕರ ವಿಷಯದಲ್ಲಿ ತಾರತಮ್ಯ ಉಂಟಾಗಿರುವುದು ನಿಜವೇ; | ಇದುವರೆಗೂ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನವನ್ನೇ ಪಾವತಿಸಲಾಗುತ್ತಿದೆ. ಕಾರ್ಮಿಕ ಇಲಾಖೆಯು ಹೊರಡಿಸಿರುವ ನೂತನ ಕನಿಷ್ಠ ವೇತನವನ್ನು ದತ್ತ ನಮೂದಕರಿಗೆ ಪಾವತಿಸಲು ಆರ್ಥಿಕ ಇಲಾಖೆ ಮತ್ತು ಕಾರ್ಮಿಕ ಇಲಾಖೆಯ ಸಹಮತಿ ಪಡೆಯಲು ಕಡತವನ್ನು ಕಳುಹಿಸಲಾಗಿದ್ದು, ಆರ್ಥಿಕ ಇಲಾಖೆ ಮತ್ತು ಕಾರ್ಮಿಕ ಇಲಾಖೆಯು ನೂತನ ಕನಿಷ್ಠ ವೇತನ ಜಾರಿಗೊಳಿಸುವುದನ್ನು ಸಚಿವ ಸಂಪುಟದ ನಿರ್ಧಾರದ ನಂತರ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತವೆ.<br>ಮುಂದುವರೆದು, ಅಧಿಕೃತ ಜ್ಞಾಪನ ಸಂಖ್ಯೆ. ಸಸಂಇ 06 ಸಿಎಸ್‌ಸಿ 2026, ದಿನಾಂಕ: 18/8/2026 ರಲ್ಲಿ ಕನಿಷ್ಠ ವೇತನ ದರಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯು ದಿನಾಂಕ: 22/5/2026 ರಂದು ಹೊರಡಿಸಿರುವ ಅಧಿಸೂಚನೆಯಲ್ಲಿನ ಅಂಶಗಳು ಕೇಂದ್ರ ಸರ್ಕಾರದ ವೇತನ ಸಂಹಿತೆ, 2019(Code on Wages, 2019) ಗೆ ಅನುಗುಣವಾಗಿದೆಯೇ ಎಂಬುದನ್ನು ಪರಿಶೀಲಿಸಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. |
| ಇ) | ಕಳೆದ ಹತ್ತಾರು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಈ ದತ್ತ ನಮೂದಕರ ಕುಂದುಕೊರತೆಗಳನ್ನು ಈಡೇರಿಸಲು ಹಾಗೂ ಅವರಿಗೆ ನೂತನ ಕನಿಷ್ಠ ವೇತನವನ್ನು ತಕ್ಷಣದಿಂದಲೇ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |
| ಈ) | ಇ-ಆಡಳಿತ ಇಲಾಖೆಯ ದತ್ತ ನಮೂದಕರಿಗೆ ಯಾವ ಕಾಲಮಿತಿಯೊಳಗೆ ಹೊಸ ಕನಿಷ್ಠ ವೇತನವನ್ನು ಜಾರಿಗೊಳಿಸಿ ಅನುದಾನ ಬಿಡುಗಡೆ ಮಾಡಲಾಗುವುದು? | ಸಚಿವ ಸಂಪುಟವು ಕೈಗೊಳ್ಳುವ ನಿರ್ಣಯದ ಆಧಾರದ ಮೇಲೆ ಕ್ರಮವಹಿಸಲಾಗುವುದು. |

**ಕಡತ ಸಂಖ್ಯೆ: ಸಿಆಸುಇ 128 ಇಜಿಎಂ 2026**

**(ಪ್ರಿಯಾಂಕ್ ಖರ್ಗೆ)**
**ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ**
**ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವರು**